190. ಶಿವಪುತ್ರಪ್ಪ ಮಡಿವಾಳಪ್ಪ ದೇಸಾಯಿ	ಹೂವಿನ ಹಿಪ್ಪರಗಿ
191. ಶ್ರೀಶೈಲಪ್ಪ ವಿರೂಪಾಕ್ಷಪ್ಪ ಬಿದರೂರು	ರೋಣ
192. ಶಿವಕುಮಾರ್ ಡಾ. ಕೆ.	ಸಾತನೂರು
193. ಶ್ರೀನಿವಾಸ ಎಂ.	ಉತ್ತರಹಳ್ಳಿ
194. ಶ್ರೀನಿವಾಸಗೌಡ	ಕೋಲಾರ
195. ಶ್ರೀನಿವಾಸ ಆರ್.	ಮುಳಬಾಗಿಲು
196. ಶ್ರೀರಾಮರೆಡ್ಡಿ ಜಿ.ವಿ.	ಬಾಗೇಪಲ್ಲಿ
197. ಶಿವಪುತ್ರಪ್ಪ ಚೆನ್ನಬಸಪ್ಪ ಮಾಳಗಿ	ಬಾಗೇವಾಡಿ
198. ಸತ್ಯನಾರಾಯಣ ಬಿ.	ಶಿರಾ
199. ಸದಾನಂದ ಗೌಡ ಡಿ.ವಿ.	ಪುತ್ತೂರು
200. ಸಗೀರ್ ಅಹಮ್ಮದ್ ಸಿ.ಆರ್.	ಚಿಕ್ಕಮಗಳೂರು
201. ಸಭಾಪತಿ ಯು.ಆರ್.	ಉಡುಪಿ
202. ಸಂಗಣ್ಣ ಅಮರಪ್ಪ ಕರಡಿ	ಕೊಪ್ಪಳ
203. ಸುಭಾಶ್ ರುಕ್ಮಯ್ಯ ಗುತ್ತೇದಾರ್	ಆಳಂದ
204. ಸುಭಾಶ್ ಶ್ರೀಧರ್ ಜೋಶಿ	ನಿಪ್ಪಾಣಿ
205. ಸುಬ್ಬರಾಯ ಮಾದಪ್ಪ ದ್ಯಾಮಕೋಡಿ	ಮಡಿಕೇರಿ
206. ಸೋಮಶೇಖರ್ ಬಿ.	ಮಳವಳ್ಳಿ
207. ಸೋಮಣ್ಣ ವಿ.	ಬಿನ್ನೀಪೇಟೆ
208. ಸುರೇಶ್ ಕುಮಾರ್ ಎಸ್.	ರಾಜಾಜಿನಗರ
209. ಶ್ರೀ ಸೋಮ್ಲಾನಾಯಕ್	ಪಾವಗಡ
210. ಸಯ್ಯದ್ ಜುಲ್ಫಿಕರ್ ಹಶ್‌ಮಿ (ಬಾಬಾಪಾಟೀಲ್)	ಬೀದರ್
211. ಶ್ರೀಮತಿ ಹೇಮಾವತಿ	ಶಾಂತಿನಗರ
212. ಆರ್.ವಿ. ದೇಶಪಾಂಡೆ	ಹಳಿಯಾಳ

ಅಧ್ಯಕ್ಷರು:– ಈಗ ಸದನವನ್ನು ಅರ್ಧ ಗಂಟೆ ಕಾಲ ಮುಂದೂಡುತ್ತೇನೆ.

(ಸನ್ಮಾನ್ಯ ಸಭಾಧ್ಯಕ್ಷರು ಸದಸ್ಯರುಗಳ ಪ್ರಮಾಣವಚನ ಸ್ವೀಕಾರ ಮುಗಿದ ನಂತರ ಅರ್ಧಗಂಟೆ ಕಾಲ ಸಭೆಯನ್ನು ಮುಂದೂಡಿದರು)

(ಸದನವು 5.10 ಕ್ಕೆ ಪುನಃ ಸಮಾವೇಶಗೊಂಡಿತು. ಮಾನ್ಯ ಹಂಗಾಮಿ ಅಧ್ಯಕ್ಷರಾದ ಶ್ರೀ ಆರ್. ಧರ್ಮಸಿಂಗ್, ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು):– ಸನ್ಮಾನ್ಯ ಅಧ್ಯಕ್ಷರೇ ಈ ದಿನ ಸಭೆಯು ಅತ್ಯಂತ ದುಃಖಕರವಾದಂತಹ ಒಂದು ಸಂತಾಪ ಸೂಚನಾ ನಿರ್ಣಯವನ್ನು ಮಂಡನೆ ಮಾಡುವಂತಹ ಸನ್ನಿವೇಶ ನಮ್ಮ ಪಾಲಿಗೆ ಬಂದಿರುತ್ತದೆ. ಈ ವಿಶೇಷ ಸನ್ನಿವೇಶದಲ್ಲಿ ನಾವು ನಿರ್ಣಯವನ್ನು ಮಂಡನೆ ಮಾಡಿ, ಈ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಕೊಡಲಿಕ್ಕೆ ಹಾಗೂ ಸಂತಾಪವನ್ನು ವ್ಯಕ್ತಮಾಡಲು ತಾವು ಅವಕಾಶ ಮಾಡಿಕೊಡಿ ಎಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಸಂತಾಪ ಸೂಚನೆ

ಅಧ್ಯಕ್ಷರು:– ಬಡಕುಟುಂಬವೊಂದರಿಂದ ಬಂದ ಎಲ್ಲಾ ಸೌಕರ್ಯಗಳಿಂದ ವಂಚಿತರಾದ ಸಾಂದ್ವಾನಯೆಂಬ ಹಳ್ಳಿಯಿಂದ ದಿಲ್ಲಿಯವರೆಗೆ ನಡೆದು ಬಂದ ಶ್ರೀ ಗ್ಯಾನಿ ಜೈಲ್‌ಸಿಂಗ್ ಇವರು ನಮ್ಮ ದೇಶ ಕಂಡ ಅಪರೂಪದ, ಪ್ರತಿಭಾಪೂರ್ಣ ವರ್ಣಮಯ ವ್ಯಕ್ತಿತ್ವದ, ಸರಳ ಸಜ್ಜನಿಕೆಯ ಮಾಜಿ ರಾಷ್ಟ್ರಪತಿ ಇಂದು ನಮ್ಮೊಂದಿಗಿಲ್ಲ.

ಮಣ್ಣಿನ ಮಗನಾದ ಶ್ರೀ ಗ್ಯಾನಿ ಜೀ, ಗಂಧವತೀ ಪೃಥ್ವಿಯ ಸಕಲ ವಾಸನೆಗಳನ್ನು ಮೈಗೂಡಿಸಿಕೊಂಡು ನಿಜವಾದ ಅರ್ಥದಲ್ಲಿ ಬೆಳೆದು ನಿಂತ ಧೀಮಂತ. ತಾನು ನಂಬಿದ ನಂಬಿಕೆಗಳಿಗಾಗಿ ಬದ್ಧನಾಗಿ ಸ್ವಾತಂತ್ರ ಹೋರಾಟಗಾರನಾಗಿ, ಹೋರಾಡಿದ ಶ್ರೀ ಗ್ಯಾನಿ ಜೈಲ್‌ಸಿಂಗ್‌ರವರು ದೇಶಭಕ್ತರು. ಆಳದಲ್ಲಿ ದೈವಭಕ್ತರು. ಗುಲಾಮಗಿರಿಯ ನೊಗವನ್ನು ಕಿತ್ತೊಗೆಯಲು ಹೋರಾಡಿದ ಅವರು, ಪಂಜಾಬಿನ ಮುಖ್ಯಮಂತ್ರಿಯಾಗಿ ತಾನು ಬೆಳೆದ ಪರಿಸರ ಹಾಗೂ ಸಮಾಜವನ್ನು ಮರೆಯದೆ, ಹಸಿರುಕ್ರಾಂತಿಗೆ ಹರಿಕಾರನಾಗಿ, ಇಂದು ದೇಶದಲ್ಲೇ ಶ್ರೀಮಂತ ರಾಜ್ಯವನ್ನಾಗಿ ಪಂಜಾಬನ್ನು ಮಾಡಿದ ಶ್ರೇಯಸ್ಸು ಶ್ರೀಯುತರದು. ವಿಶ್ವವಿದ್ಯಾನಿಲಯದ ಪದವಿ ಪಡೆಯದ ಶ್ರೀ ಗ್ಯಾನೀಜಿಯವರು ಉತ್ತಮ ಆಡಳಿತಗಾರರೆಂದು ಹೆಸರು ಪಡೆದು ಎಲ್ಲರಿಗೂ ಅಚ್ಚರಿವುಂಟು ಮಾಡಿದರು. ಸಂವಿಧಾನದ ವಿಧಿವಿಧಾನಗಳನ್ನು ಎತ್ತ ಹಿಡಿಯಲು ಶ್ರಮಿಸಿದ ಅನೇಕ ಭಾರಿ ಬಿಕ್ಕಟ್ಟಿನ ಪ್ರಸಂಗಗಳಲ್ಲಿ ರಾಷ್ಟ್ರಪತಿ ಸ್ಥಾನದ ಘನತೆಗೆ ಕುಂದಾಗದಂತೆ ನಡೆದುಕೊಂಡ ಅವರ ಜಾಣ್ಮೆ ಹಾಗೂ ಮುತ್ಸದ್ದಿತನವನ್ನು ಇಡೀ ರಾಷ್ಟ್ರವೇ ಮೆಚ್ಚಿಕೊಂಡಿದ್ದು ಇತ್ತೀಚಿನ ಇತಿಹಾಸ. ಸಾರ್ವಕಾಲಿಕ ಜೀವನ ಕೊಡಬಹುದಾದ ಎಲ್ಲಾ ಎತ್ತರದ ಸ್ಥಳಗಳನ್ನೇರಿದ ಶ್ರೀ ಗ್ಯಾನೀಜಿ, ಮೂಲತಃ ಕವಿ. ಉರ್ದು ಭಾಷೆಯ ಮೇಲೆ ಅವರಿಗಿದ್ದ ಪಾಂಡಿತ್ಯ ಅವರನ್ನು ರಾಜಕಾರಣದಲ್ಲಿ ಒಬ್ಬ ಅಪರೂಪದ ವ್ಯಕ್ತಿಯನ್ನಾಗಿ ರೂಪಿಸಿ ಪ್ರಜಾಪ್ರಭುತ್ವ, ಪ್ರತಿಭಾನ್ವಿತರಿಗೆ ಅವಕಾಶ ಕಲ್ಪಿಸಿಕೊಡುವ ಮನುಕುಲದ ಒಂದು ವ್ಯವಸ್ಥೆ. ಸಾಮಾಜಿಕ ನ್ಯಾಯ, ಧರ್ಮನಿರಪೇಕ್ಷತೆ ಹಾಗೂ ತಾನಾಶಾಹಿ ವಿರುದ್ಧ ಹೋರಾಟವನ್ನು ತಮ್ಮ ಬದುಕಿನ ಮುಸ್ಸಂಜೆಯವರೆಗೆ ನಡೆಸಿಕೊಂಡು ಬಂದ ಶ್ರೀ ಗ್ಯಾನೀಜಿಯವರ ನಿಧನದಿಂದ ರಾಷ್ಟ್ರಕ್ಕೆ ತುಂಬಲಾರದ ನಷ್ಟವಾಗಿದೆ. ಅತ್ಯಂತ ಗೌರವದಿಂದ ಈ ಸದನ ಅವರ ಸೇವೆಯನ್ನು ಸ್ಮರಿಸುತ್ತದೆ ಮತ್ತು ದಾಖಲಿಸುತ್ತದೆ.

ಈ ಸದನ ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ ಈ ಗ್ಯಾನೀಜಿಯವರ ಅಗಲುವಿಕೆಯನ್ನು ಭರಿಸಲು ಭಗವಂತನು ಅವರ ಕುಟುಂಬದವರಿಗೆ ಶಕ್ತಿ ಕೊಡಲೆಂದು ಹಾರೈಸುತ್ತದೆ.

ಮೃತರ ಗೌರವಾರ್ಥವಾಗಿ ಸನ್ಮಾನ್ಯ ಸದಸ್ಯರೆಲ್ಲರೂ ಎರಡು ನಿಮಿಷ ಮೌನಾಚರಣೆ ಮಾಡಬೇಕೆಂದು ವಿನಂತಿಸುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಎರಡು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು:– ಈ ದಿನದ ಸಭೆಯನ್ನು ಮುಂದೂಡುತ್ತಾ ಮತ್ತೆ ನಾಳೆ ಬೆಳಿಗ್ಗೆ 10 ಗಂಟೆಗೆ ಸಭೆ ಸೇರುವುದು.

(ಸದನವು ಸಂಜೆ 5.15 ಗಂಟೆಗೆ ಮುಕ್ತಾಯವಾಗಿ ಪುನಃ ದಿನಾಂಕ 27 – 12 – 1994ರ ಮಂಗಳವಾರದಂದು ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)